
# ‘ವಿವೇಕಪ್ರಭ’ ಪತ್ರಿಕೆಯ ಉಗಮ ಹಾಗೂ ಬೆಳವಣಿಗೆ

ಸ್ವಾಮಿ ಆತ್ಮಜ್ಞಾನಂದ

ಮೈಸೂರು ರಾಮಕೃಷ್ಣ ಆಶ್ರಮದಲ್ಲಿ ಪ್ರಕಾಶನ ವಿಭಾಗದೊಂದಿಗೆ ರಾಮಕೃಷ್ಣ-ವಿವೇಕಾನಂದ ವೇದಾಂತ ಸಾಹಿತ್ಯವನ್ನು ಪ್ರಚಾರ ಮಾಡುವ ಕಾರ್ಯದಲ್ಲಿ ಮಹತ್ತರ ಪಾತ್ರ ವಹಿಸುತ್ತಿದೆ ‘ವಿವೇಕಪ್ರಭ.’ ಪತ್ರಿಕೆ ಆರಂಭವಾದ ಸಮಯದಿಂದಲೂ ಅದರ ಆರಂಭ, ಬೆಳವಣಿಗೆಗಳನ್ನು ಹತ್ತಿರದಿಂದ ಕಂಡಿದ್ದ ಪೂಜ್ಯ ಸ್ವಾಮೀಜಿಯವರು ‘ವಿವೇಕಪ್ರಭ’ದ ಸಂಪಾದಕರಾಗಿ ಸೇವೆ ಸಲ್ಲಿಸಿದ್ದರು. ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರೂ ಆಗಿದ್ದ ಅವರು ಪ್ರಸ್ತುತ ಬ್ರೆಜಿಲ್‌ನ ರಿಯೋ ಡಿ ಜನೇರಿಯೋ ಆಶ್ರಮದ ಅಧ್ಯಕ್ಷರಾಗಿದ್ದಾರೆ.

‘ವಿವೇಕಪ್ರಭ’ ಮಾಸಪತ್ರಿಕೆಗೆ ರಜತಮಹೋತ್ಸವದ ಸಂಭ್ರಮ, ಸಡಗರ! ಎಂತಹ ಆನಂದದ ವಿಷಯ! ೨೫ ವರ್ಷಗಳ ಕಾಲ ಅಡೆತಡೆಯಿಲ್ಲದೆ ರಾಮಕೃಷ್ಣ-ವಿವೇಕಾನಂದ- ವೇದಾಂತ ವಿಚಾರಗಳನ್ನು ಭಕ್ತಜನರಿಗೆ ನೀಡುತ್ತಿರುವ ಈ ಪತ್ರಿಕೆ ಸಾರ್ಥಕ. ಈಗಿನ್ನೂ ಈ ಪತ್ರಿಕೆ ‘ಶಿಶು’. ಕೇವಲ ೨೫ ವರ್ಷಗಳಾಗಿವೆ! ಅನೇಕ ಶತಮಾನಗಳ ಕಾಲ ಈ ಪತ್ರಿಕೆ ನಿರಂತರವಾಗಿ ಭಾರತೀಯ ಸಂಸ್ಕೃತಿ, ವೇದಾಂತ ವಿಚಾರಗಳನ್ನು ತಿಳಿಸುತ್ತಾ ಇರಲಿ ಎಂದು ಹಾರೈಸೋಣ. ಸ್ವಾಮಿ ವಿವೇಕಾನಂದರು ಒಂದೆಡೆ ಹೇಳುತ್ತಾರೆ, ‘‘ಇಲ್ಲಿನ (ಬೇಲೂರು ಮಠ) ವಿಚಾರಗಳು ೧೫೦೦ ವರ್ಷಗಳ ಕಾಲ ಎಲ್ಲೆಡೆ ಪ್ರಚಾರವಾಗುವುವು ಹಾಗೂ ಮನ್ನಣೆ ಪಡೆಯುವುವು.’’ ಈ ದಿಕ್ಕಿನಲ್ಲಿ ರೂಪುಗೊಳ್ಳುತ್ತಿರುವ ‘ವಿವೇಕಪ್ರಭ’ ಪತ್ರಿಕೆಗೆ ಸ್ವಾಮಿ ವಿವೇಕಾನಂದರ ಆಶೀರ್ವಾದ ನಿಶ್ಚಿತ! ಯಾವುದೇ ಸಂದೇಹವಿಲ್ಲ!




೧೯೯೮ರಲ್ಲಿ ಸ್ವಾಮಿ ಆತ್ಮವಿದಾನಂದರು ಮೈಸೂರಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿ ನೇಮಕಗೊಂಡರು. ಕನ್ನಡದಲ್ಲಿ ಒಂದು ಅಧಿಕೃತ ಪತ್ರಿಕೆಯನ್ನು ಪ್ರಾರಂಭಿಸಬೇಕು ಎಂದೇ ಅವರಿಗೆ ಹಿರಿಯರ ಆದೇಶವಾಗಿತ್ತು. ಪೂಜ್ಯ ಸ್ವಾಮಿ ರಂಗನಾಥಾನಂದಜಿ ಆಗ ರಾಮಕೃಷ್ಣ ಸಂಘದ ಅಧ್ಯಕ್ಷರಾಗಿದ್ದರು. ದೇಶವಿದೇಶಗಳಲ್ಲೂ ವೇದಾಂತ ಹಾಗೂ ರಾಮಕೃಷ್ಣ-ವಿವೇಕಾನಂದರ ಉದಾತ್ತ ವಿಚಾರಗಳನ್ನು ತಮ್ಮ ಅದ್ಭುತ ಪ್ರವಚನಗಳಲ್ಲಿ ತಿಳಿಸಿದ್ದ ಇವರಿಗೆ ಭಾರತದ ಅನೇಕ ಭಾಷೆಗಳಲ್ಲಿ ಪತ್ರಿಕೆಗಳಿದ್ದರೂ, ಕನ್ನಡ ಭಾಷೆಯಲ್ಲಿ ಇನ್ನೂ ಪ್ರಾರಂಭವಾಗಿಲ್ಲ ಎಂಬ ತುಡಿತ! ತಮ್ಮ ಸಂನ್ಯಾಸ ಜೀವನವನ್ನು ಮೈಸೂರಿನ ಆಶ್ರಮದಲ್ಲೇ ಪ್ರಾರಂಭಿಸಿದ್ದ ಇವರಿಗೆ, ಈ ಕೇಂದ್ರದ ಬಗ್ಗೆ ವಿಶೇಷ ಒಲವು. ಎಲ್ಲವನ್ನೂ ತಿಳಿದಿದ್ದ ಪೂಜ್ಯರು, ನಕಾರಾತ್ಮಕ ಸಂಶಯಗಳಿಗೆ ಅವಕಾಶ ನೀಡದೆ, ‘‘ಏಕೆ ಸಾಧ್ಯವಾಗದು!’’ ಎಂದು ಪ್ರೋತ್ಸಾಹಿಸಿದರು. ಅದಕ್ಕೆ ಬೇಕಾಗುವ ಮೂಲಧನವನ್ನು ನೀಡಿ ತುಂಬು ಉತ್ಸಾಹದಿಂದ ಕಾಯುತ್ತಿದ್ದರು. ಅವರ ಪ್ರೋತ್ಸಾಹ, ಉತ್ಸುಕತೆಗಳೇ ಮೂಲಕಾರಣ ಪತ್ರಿಕೆಯ ಪ್ರಾರಂಭಕ್ಕೆ. ಸಮಯ ಕೂಡಿಬಂದಿತ್ತು ಎಂದೂ ಭಾವಿಸಬೇಕು.

ದಿವ್ಯತ್ರಯರ ಹಾಗೂ ವೇದಾಂತ ಸಾಹಿತ್ಯವನ್ನು ಕನ್ನಡದಲ್ಲಿ ಪ್ರಕಟಿಸುವ ಪ್ರಧಾನ ಕೇಂದ್ರ, ಮೈಸೂರು ರಾಮಕೃಷ್ಣ ಆಶ್ರಮ. ಕನ್ನಡ ಸಾಹಿತ್ಯದ ದಿಗ್ಗಜರಾದ ಶ್ರೀಕುವೆಂಪು. ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಪ್ರಭುಶಂಕರ, ಪ್ರಭುಪ್ರಸಾದ, ಡಾ. ಆ.ರಾ. ಮಿತ್ರ-ಇವರೆಲ್ಲರ ಒಡನಾಟವಿದ್ದರೂ ಆಶ್ರಮವು ಪತ್ರಿಕೆಯನ್ನು ಪ್ರಾರಂಭಿಸಿರಲಿಲ್ಲ. ಪೂಜ್ಯ ಸ್ವಾಮಿ ಸೋಮನಾಥಾನಂದರು ಸಾಹಿತ್ಯ ಪ್ರಚಾರಕ್ಕೆ ಒತ್ತು ನೀಡಿ ತಾವೇ ಸ್ವತಃ ಅನೇಕ ಗ್ರಂಥಗಳನ್ನು ಅನುವಾದಿಸಿ, ಪ್ರಕಟಿಸಿದರು. ಪೂಜ್ಯ ಸ್ವಾಮಿ ಆದಿದೇವಾನಂದರು ಮಂಗಳೂರಿನ ಆಶ್ರಮದಲ್ಲಿ ಅಧ್ಯಕ್ಷರಾಗಿದ್ದ ಕಾಲದಲ್ಲಿ ಶಾಸ್ತ್ರಗ್ರಂಥಗಳ ಅನುವಾದ ಮಾಡಿ ಪ್ರಕಟಿಸಿದರು. ಸ್ವಾಮಿ ಪುರುಷೋತ್ತಮಾನಂದಜಿ ತಮ್ಮ ಪ್ರವಚನ ಹಾಗೂ ಸಂಗೀತದ ಮೂಲಕ ಕನ್ನಡದ ಎಲ್ಲ ಜನರ ಹೃನ್ಮನಗಳನ್ನು ಗೆದ್ದಿದ್ದರು; ದಿವ್ಯತ್ರಯರ ವಿಸ್ತೃತ ಜೀವನ ಸಂದೇಶಗಳನ್ನು ಪ್ರಕಟಿಸಿ ಸಾಹಿತ್ಯಪ್ರಚಾರಕ್ಕೆ ಪುಷ್ಟಿ ನೀಡಿದ್ದರು. ಸ್ವಾಮಿ ಜಗದಾತ್ಮಾನಂದಜಿ ತಮ್ಮ ಪ್ರಖರವಾದ ವಾಕ್‌ಶೈಲಿಗೆ ಪ್ರಸಿದ್ಧರಾಗಿದ್ದರು ಹಾಗೂ ಅವರ ‘ಬದುಕಲು ಕಲಿಯಿರಿ’ ಗ್ರಂಥ ಅತ್ಯಂತ ಯಶಸ್ಸನ್ನು ಕಂಡಿತ್ತು. ಸ್ವಾಮಿ ಹರ್ಷಾನಂದರು ಬೆಂಗಳೂರಿನ ಮಠದಲ್ಲಿ

ಪ್ರವಚನಮಾಲೆಗಳನ್ನು ನೀಡಿ 'ಹಿಂದೂಧರ್ಮದ ವಿಶ್ವಕೋಶ'ವನ್ನು ಆಂಗ್ಲಭಾಷೆಯಲ್ಲಿ ಪ್ರಕಟಿಸಲು ಹಾಗೂ ಭಾರತೀಯ ಸಂಸ್ಕೃತಿ-ಪರಂಪರೆಗಳಿಗೆ ಸಮರ್ಪಕ ವ್ಯಾಖ್ಯಾನ ನೀಡಲು ತಯಾರಿ ನಡೆಸುತ್ತಿದ್ದರು. ಆದರೂ ಕನ್ನಡದಲ್ಲಿ ಪತ್ರಿಕೆಯಿಲ್ಲ ಎಂಬ ಚಿಂತೆ ಎಲ್ಲರನ್ನೂ ಕಾಡುತ್ತಿತ್ತು. ಹಲವಾರು ಸಂಸ್ಥೆಗಳು ಆಧ್ಯಾತ್ಮಿಕ ಪತ್ರಿಕೆಗಳನ್ನು ಪ್ರಕಟಿಸುತ್ತಿದ್ದವು ಆದರೆ ರಾಮಕೃಷ್ಣ ಸಂಘದ ವತಿಯಿಂದ ಒಂದು ಕನ್ನಡ ಪತ್ರಿಕೆ ಏಕೆ ಇಲ್ಲ ಎಂಬುದೇ ಎಲ್ಲರ ಪ್ರಶ್ನೆ! ಇಂತಹ ಜವಾಬ್ದಾರಿಯನ್ನು ನಿಭಾಯಿಸಬಲ್ಲ ವ್ಯಕ್ತಿಯನ್ನು ಆಯ್ದು ಕಳಿಸಿದ್ದರು ಮಠದ ಹಿರಿಯರು.

ಮೈಸೂರಿಗೆ ಬಂದ ಕೆಲವೇ ದಿನಗಳಲ್ಲಿ ಸ್ವಾಮಿ ಆತ್ಮವಿದಾನಂದರು ತಮ್ಮ ಕಾರ್ಯಯೋಜನೆಯನ್ನು ಎಲ್ಲರಿಗೂ ತಿಳಿಯಪಡಿಸಿದರು. ಸ್ವಾಮಿ ಸುರೇಶಾನಂದರು ನಿವೃತ್ತಿಯನ್ನು ಪಡೆದು ಬಿಳಿಗಿರಿರಂಗನ ಬೆಟ್ಟದ ಕುಟೀರದಲ್ಲಿ ಇರುತ್ತಿದ್ದರು. ಹಿರಿಯರಾದ ಅವರನ್ನು, ಸ್ವಾಮಿ ಜಗದಾತ್ಮಾನಂದಜಿ, ಸ್ವಾಮಿ ಪುರುಷೋತ್ತಮಾನಂದಜಿ, ಸ್ವಾಮಿ ರಾಘವೇಶಾನಂದಜಿ, ಡಾ. ಪ್ರಭುಶಂಕರ, ಪ್ರಭುಪ್ರಸಾದ, ಕೆ.ಸಿ.ಶಿವಪ್ಪ, ನಿರಂಜನ ವಾನಳ್ಳಿ ಹಾಗೂ ಅನೇಕ ಹಿತೈಷಿಗಳನ್ನು ಒಗ್ಗೂಡಿಸಿ ಒಂದು ಸಲಹಾ ಮಂಡಳಿಯನ್ನು ರಚಿಸಿ ಆಗಾಗ್ಗೆ ಪ್ರಗತಿಯನ್ನು ಚರ್ಚಿಸಲು ಭೇಟಿಮಾಡುತ್ತಿದ್ದರು. ಎಲ್ಲ ಪ್ರಸಿದ್ಧ ಮಾಸಪತ್ರಿಕೆಗಳನ್ನು ಪರಿಶೀಲಿಸಿ ನಮ್ಮ ಕನ್ನಡದ ಪತ್ರಿಕೆ ಹೇಗಿರಬೇಕು, ಯಾರಿಗಾಗಿ ಪತ್ರಿಕೆ ಮೀಸಲಿರಬೇಕು, ಎಂತಹ ಲೇಖನಗಳಿರಬೇಕು, ಯಾರು ಲೇಖಕರು ಹಾಗೂ ಯಾರು ಸಂಪಾದಕರು, ಅವರಿಗೆ ಸಹಾಯ ಮಾಡುವ ಸಿಬ್ಬಂದಿ, ಕಾರ್ಯಾಗಾರ ಇತ್ಯಾದಿಗಳನ್ನು ವ್ಯವಸ್ಥಿತ ರೀತಿಯಲ್ಲಿ ಚರ್ಚಿಸಲಾಗುತ್ತಿತ್ತು. ಮೊದಲ ಸಂಚಿಕೆ ಭರ್ಜರಿಯಾಗಿರಬೇಕು, ಆಕರ್ಷಣೀಯವಾಗಿರಬೇಕು, ಸಾವಿರಾರು ಜನ ಚಂದಾದಾರರಾಗಲು ಎಲ್ಲಿ ಹೇಗೆ ಪ್ರಯತ್ನಮಾಡಬೇಕು ಎಂದು ತೀರ್ಮಾನಿಸಲಾಯಿತು. ಉತ್ತಮ ಚಿಂತಕರಾದ ಸ್ವಾಮಿ ನಿತ್ಯಸ್ಥಾನಂದಜಿ ಮೊದಲ ಸಂಪಾದಕರಾಗಿ ಮಾಸಪತ್ರಿಕೆಯ ಜವಾಬ್ದಾರಿಯನ್ನು ನಿಭಾಯಿಸಬೇಕೆಂದು ತೀರ್ಮಾನವಾಯಿತು. ಅವರು ಈಗಾಗಲೇ ಹಲವಾರು ಗ್ರಂಥಗಳನ್ನು ರಚಿಸಿ ಪ್ರಕಟಣಾ ವಿಭಾಗದ ಕಾರ್ಯ ಚಟುವಟಿಕೆಗಳಲ್ಲಿ ಚೆನ್ನಾಗಿ ಪಳಗಿದ್ದರು. ಅವರು ಸಮ್ಮತಿಸಿದಾಗ ಎಲ್ಲರಿಗೂ ಮೊದಲ ಹಂತವನ್ನು ದಾಟಿದ ಸಂತಸ!

ಸಂಪಾದಕರ ಜವಾಬ್ದಾರಿಯನ್ನು ಕೈಗೊಳ್ಳುವ ಮುನ್ನ ಅದಕ್ಕೆ ಬೇಕಾದ ಸಿದ್ಧತೆಯನ್ನು ಮಾಡಲು ಹಿಮಾಲಯದ ಮಾಯಾವತಿ ಕೇಂದ್ರದಲ್ಲಿ ಕೆಲವು ಕಾಲ ಇರಲು ತೀರ್ಮಾನಿಸಿದರು ಸ್ವಾಮಿ ನಿತ್ಯಸ್ಥಾನಂದರು. ಸ್ವಾಮಿ ವಿವೇಕಾನಂದರು ಪ್ರಾರಂಭಿಸಿದ್ದ 'ಪ್ರಬುದ್ಧ ಭಾರತ' ಆಂಗ್ಲ ಮಾಸಪತ್ರಿಕೆ ಅಲ್ಲಿಂದಲೇ ಪ್ರಕಟವಾಗುವುದು. ಅದರ ಸಂಪಾದಕರು ಹಾಗೂ ಅಲ್ಲಿನ ಸಮೃದ್ಧ ಗ್ರಂಥಗಾರವನ್ನು ಬಳಸಿಕೊಂಡು ಎಲ್ಲ ಮಾಹಿತಿಯನ್ನು ಪಡೆದು ಮೈಸೂರಿಗೆ ಮರಳಿದರು. ಇಷ್ಟರಲ್ಲಿ ಆತ್ಮವಿದಾನಂದರು ಚಂದಾ ಹಣವನ್ನು ಸಂಗ್ರಹಿಸಲು ಬೇಕಾದ ಅರ್ಜಿ, ರಸೀತಿ, ಮನವಿ ಇತ್ಯಾದಿಗಳು ಅಣಿ ಮಾಡಿದರು. ಕರ್ನಾಟಕದ ಎಲ್ಲೆಡೆ 'ವಿವೇಕಪ್ರಭ' ಪತ್ರಿಕೆಯ ಬಗ್ಗೆ ಮಾಹಿತಿ ಹಾಗೂ ಚಂದಾದಾರರನ್ನು ನೊಂದಾಯಿಸುವ ಪ್ರಕ್ರಿಯೆ ಪ್ರಾರಂಭವಾಯಿತು. ಕನ್ನಡದ ಜನತೆ ಹಾಗೂ ಭಕ್ತಮಂಡಳಿ ಒಳ್ಳೆಯ ಪ್ರತಿಕ್ರಿಯೆ ತೋರಿದರು. ಇದರಿಂದ ಎಲ್ಲರ ಉತ್ಸಾಹ ಇಮ್ಮಡಿಸಿತು.

ಆಗ ನಮಗೆಲ್ಲ ನೆನಪಿಗೆ ಬರುತ್ತಿದ್ದುದು ಶ್ರೀ ಶಂಕರಾಚಾರ್ಯರ ಮಾಯಾಶಕ್ತಿಯ ಕುರಿತು ವ್ಯಾಖ್ಯಾನ. '**ಅಘಟಿತ ಘಟನಾ ಪಟೀಯಸೀ ಮಾಯಾ** - ಅಸಾಧ್ಯವನ್ನು ಸಾಧ್ಯವಾಗಿಸುವ ಅನಿರ್ವಚನೀಯ ಶಕ್ತಿ' ಎಂದು ವಿವರಿಸುತ್ತಾರೆ. ಯಾವ ಕಾರ್ಯವನ್ನು ಅನೇಕರು 'ಆಗದು' ಎಂದು ಭಾವಿಸಿದ್ದರೋ, ದಿವ್ಯಸಂಕಲ್ಪ-ಶಕ್ತಿಗಳು ಸುಲಭ ಮಾಡಿದ್ದವು. ''ಅಸಾಧ್ಯವೆಂಬುದು ಯಾವುದೂ ಇಲ್ಲ. ಚೈತನ್ಯಶಕ್ತಿಗೆ ಅಸಾಧ್ಯವೆಂಬುದು ಇಲ್ಲ, ಹೀಗೆ ಭಾವಿಸು. ನನ್ನಿಂದ ಆಗದು, ಇದು ಅಸಾಧ್ಯವೆಂದು ಭಾವಿಸುವುದೇ ಮಹಾಪಾಪ, ದುರ್ಬಲತೆ'' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. *(ಕೃತಿಶ್ರೇಣಿ, ೨.೩೦೮)* ಮತ್ತೊಂದೆಡೆ ಹೇಳುತ್ತಾರೆ, ''ಪ್ರತಿಯೊಂದು ಕೆಲಸವೂ ಈ ಹಂತಗಳ ಮೂಲಕ ಸಾಗಬೇಕು-ಅಪಹಾಸ್ಯ, ವಿರೋಧ ಹಾಗೂ ನಂತರ ಸ್ವೀಕೃತಿ. ತನ್ನ ಸಮಯಕ್ಕಿಂತ ಮುಂಚಿತವಾಗಿ ಯೋಚಿಸುವ ಪ್ರತಿಯೊಬ್ಬ ವ್ಯಕ್ತಿಯನ್ನೂ ತಪ್ಪಾಗಿ ತಿಳಿಯುವುದು ಖಚಿತ!'' *(ಅಲ್ಲೇ, ಪು.೯೧)* ಸ್ವಾಮಿ ಆತ್ಮವಿದಾನಂದರ ಉತ್ಸಾಹ-ಸಂಕಲ್ಪಗಳಿಗೆ ಸಂದೇಹ-ಭಯಗಳನ್ನು ಅನೇಕರು ವ್ಯಕ್ತಪಡಿಸಿರಬಹುದು. ಆದರೆ ಅದಾವುದನ್ನು ಅವರು ಗಮನಿಸಲಿಲ್ಲ. ಪ್ರತಿವರ್ಷ ಯಾವುದಾದರೊಂದು ಹೊಸಯೋಜನೆಯನ್ನು ಕೈಗೊಳ್ಳುತ್ತಿದ್ದ ವರ್ಷದ ಪ್ರಾರಂಭದಲ್ಲಿ, ''ಈ ವರ್ಷ ಯಾವ ಸೇವೆ ಯನ್ನು ಮಾಡೋಣ? ದಿವ್ಯತ್ರಯರ ವಾಣಿಯನ್ನು ಹೆಚ್ಚಿನ ಜನರಿಗೆ ತಲುಪಿಸಬೇಕು. Missionary ಉತ್ಸಾಹದಿಂದ ದುಡಿಯಬೇಕು'' ಎನ್ನುತ್ತಿದ್ದರು. ಭಕ್ತರೆಲ್ಲರನ್ನೂ ಒಗ್ಗೂಡಿಸಿ ಪ್ರತಿಯೊಬ್ಬ ರಿಗೂ ಜವಾಬ್ದಾರಿಗಳನ್ನು ನೀಡಿ ಪತ್ರಿಕೆಗೆ ಚಂದಾದಾರರನ್ನು ಸಂಗ್ರಹಿಸುವ ಸೇವೆಯಲ್ಲಿ ತೊಡಗಿಸಿದರು. ಅನೇಕರು ವಿವಿಧ ಬಡಾವಣೆಗಳ ಮನೆಮನೆಗೆ, ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ, ವೈಯಕ್ತಿಕವಾಗಿ ಚಂದಾದಾರರನ್ನು ನೊಂದಾಯಿಸಿದರು. ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಸಂಗ್ರಹಿಸಿದ ಹಣ ಹಾಗೂ ರಸೀತಿ ಪುಸ್ತಕಗಳನ್ನು ತಂದೊಪ್ಪಿಸುತ್ತಿದ್ದರು. ಪ್ರಯಾಣದ ಖರ್ಚಿಗಾಗಿ ಅವರಿಗೆಲ್ಲ ಒಂದು ಸ್ವಲ್ಪ commission ನೀಡಲಾಗುತ್ತಿತ್ತು. ಅನೇಕರು ಅದನ್ನೂ ಪತ್ರಿಕೆಗೆ ಸಲ್ಲಲಿ ಎಂದು ಮರಳಿಸುತ್ತಿದ್ದರು. ಹೀಗೆ ಚಂದಾದಾರರನ್ನು ಸಂಗ್ರಹಿಸುವಲ್ಲಿ ಅನೇಕ ಭಕ್ತರು ಕೆಲಸ ಮಾಡಿದ್ದಾರೆ. ಅವರುಗಳ ಹೆಸರುಗಳು ನೆನಪಿದ್ದರೂ ಇಲ್ಲಿ ಉಲ್ಲೇಖಿಸಲಾರೆ. ಕಾರಣ ಅದೊಂದು ದೊಡ್ಡ

ಪಟ್ಟಿಯಾಗುತ್ತದೆ. ಅಂತೂ ಎಲ್ಲರ ಸಹಕಾರ ಸೇವೆಗಳಿಂದ ಚಂದಾದಾರರ ಸಂಖ್ಯೆ ಏರುತ್ತ ಹೋಯಿತು. ಪ್ರತಿಸಾವಿರ ದಾಟಿದಾಗಲೂ ಆತ್ಮವಿದಾನಂದರು, ಸಂತಸದಿಂದ, ''೧೩, ೦೦೦ ಆಯಿತು; ೧೬,೦೦೦ ಆಯಿತು'' ಎಂದು ಆನಂದಪಡುತ್ತಿದ್ದರು. ಚಂದಾದಾರರ ಹೆಸರು, ಸಂಪೂರ್ಣ ವಿಳಾಸಗಳ ದಾಖಲೆಯನ್ನು ಸ್ವಾಮಿ ವೀರೇಶಾನಂದರು ನೋಡಿಕೊಳ್ಳು ತ್ತಿದ್ದರು. ಹಗಲು ರಾತ್ರಿ ಕೆಲಸ ಮಾಡಿ ಎಲ್ಲ ಮಾಹಿತಿಯನ್ನು ಸಂರಕ್ಷಿಸುತ್ತಿದ್ದರು. 'ವಿವೇಕಪ್ರಭ' ಕಛೇರಿಯ ಮೇಲ್ವಿಚಾರಕರಾಗಿ ಸ್ವಾಮಿ ವೀರೇಶಾನಂದರು ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿದ್ದರು. ಕನ್ನಡದಲ್ಲಿ ಲೇಖನಗಳ ಸಂಯೋಜನೆ, ಪತ್ರಿಕೆಯ ವಿನ್ಯಾಸ, ಮುಖಪುಟದ ರಚನೆ-ವಿನ್ಯಾಸಗಳನ್ನು ಕಲಿತು, ಚೆನ್ನಾಗಿ ರೂಢಿಸಿಕೊಂಡರು. ಅವರಿಗೆ ಸಹಾಯಕರಾಗಿ ಬ್ರ.ವಿಜಯ ಕುಮಾರರು ನೇಮಕಗೊಂಡರು. ಲೇಖಕರಿಗೆ ಪತ್ರಗಳು, ಅಕ್ಷರ ಸಂಯೋಜನೆ ಹಾಗೂ ಮುದ್ರಣಕ್ಕಾಗಿ ಕಂಪ್ಯೂಟರ್, ಪ್ರಿಂಟರ್‌ಗಳು, scanner ಇತ್ಯಾದಿಗಳ ವ್ಯವಸ್ಥೆಯಾಯಿತು. ಪತ್ರಿಕೆಯನ್ನು ಪ್ರಕಟಿಸಲು ಸರ್ಕಾರದ ಅನುಮತಿ, ಅಂಚೆಕಛೇರಿಯ ಅನುಮತಿ ಇತ್ಯಾದಿಗಳನ್ನು ಪಡೆಯಲು ಸ್ವಾಮಿ ವೀರೇಶಾನಂದರು ಬೆಂಗಳೂರಿಗೆ ಹಾಗೂ ಮೈಸೂರಿನ ಸರ್ಕಾರಿ ವಿಭಾಗಗಳಿಗೆ ಹೋಗುತ್ತಿದ್ದರು. ಪತ್ರಿಕೆಯನ್ನು ಮುದ್ರಿಸಲು ಮೈಸೂರಿನ ಪಟ್ಟಾಭಿ ಎಂಟರ್‌ಪ್ರೈಸಸ್ ಅವರೊಂದಿಗೆ ಮಾತುಕತೆ ಪ್ರಾರಂಭ ಮಾಡಿ ಅವರ ಮುದ್ರಣಯಂತ್ರ ಹಾಗೂ ಎಲ್ಲ ವ್ಯವಸ್ಥೆಗಳನ್ನು ನೋಡಿ ನಿರ್ಧಾರಕ್ಕೆಗೊಳ್ಳಲಾಯಿತು.

ಪತ್ರಿಕೆಯ ಸಂಬಂಧವಾಗಿ ನಡೆದ ಒಂದು ಆಲೋಚನೆಯಲ್ಲಿ ಸ್ವಾಮಿ ಪುರುಷೋತ್ತಮಾನಂದರು, ''ಮೊದಲ ಸಂಚಿಕೆಯ ಮುಖಪುಟದಲ್ಲಿ ಸ್ವಾಮಿ ವಿವೇಕಾನಂದರ ಚಿತ್ರವಿರಬೇಕು ಹಾಗೂ ಸೂರ್ಯೋದಯದ ಪ್ರಶಾಂತ ಸೌಂದರ್ಯವನ್ನು ಬಿಂಬಿಸುವ ರಂಗುಗಳಿರಬೇಕು'' ಎಂದು ಅಭಿಪ್ರಾಯಪಟ್ಟರು. ಇದು ಎಲ್ಲರಿಗೂ ಒಪ್ಪಿಗೆಯಾಯಿತು. ನಾಲ್ಕೈದು ನಮೂನೆಗಳನ್ನು ತಯಾರು ಮಾಡಿದರು ವೀರೇಶಾನಂದರು. ಎಲ್ಲರ ಮೆಚ್ಚುಗೆ ಪಡೆದ ವಿನ್ಯಾಸವನ್ನು ಮೊದಲ ಸಂಚಿಕೆಗೆ ಬಳಸಲಾಯಿತು. ಬೆಂಗಳೂರಿನ ಮಯೂರ್ ಗ್ರಾಫಿಕ್ಸ್‌ನ ಪಾರ್ಥಸಾರಥಿಯವರು ಮುಖಪುಟವನ್ನು ಒಂದು ವರ್ಷದ ಅವಧಿ ಉಚಿತವಾಗಿ ಮುದ್ರಿಸಿಕೊಡಲು ಮುಂದೆ ಬಂದರು! ಇವರ ತಂದೆ ಶ್ರೀರಾಮಪ್ಪನವರು ಬೆಂಗಳೂರಿನ ಮಠದೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು ಹಾಗೂ ಕುಟುಂಬದ ಎಲ್ಲ ಸದಸ್ಯರೂ ಸ್ವಾಮಿ ಸುರೇಶಾನಂದರಿಗೆ ಬಹಳ ಪರಿಚಯವಿದ್ದರು. ಶ್ರೀ ಪಾರ್ಥಸಾರಥಿ, ಅವರ ತಮ್ಮಂದಿರು ಹಾಗೂ ಅವರ ಮಕ್ಕಳಲ್ಲಿ ಅನೇಕರು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳು! ಇಂದಿಗೂ ಕೂಡ ಅವರು ಈ ಸೇವೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ!

ಪತ್ರಿಕೆ ಬೆಂಗಳೂರಿನಲ್ಲಿ ಮುದ್ರಣಗೊಳ್ಳುತ್ತಿದೆ ಈಗ. ಮೈಸೂರಿಗೆ ಪತ್ರಿಕೆ ಸಾವಿರಾರು ಪ್ರತಿಗಳು ಬಂದಾಗ ಅವುಗಳನ್ನು ಸರಿಯಾದ ವಿಳಾಸಗಳಿಗೆ ಕಳಿಸಲು ಹಾಗೂ ಅಂಚೆಕಛೇರಿಗೆ ತಲುಪಿಸಲು ಭಕ್ತರ ಒಂದು ತಂಡ, ಸೇವ ಸಲ್ಲಿಸಲು ಪ್ರಾರಂಭಿಸಿತು. ಪ್ರತಿ ತಿಂಗಳೂ ಪತ್ರಿಕೆ ಬಂದೊಡನೆ ವಿಳಾಸದ Label ಗಳನ್ನು ಅಂಟಿಸಿ, ಜಿಲ್ಲೆಗಳ ಪ್ರಕಾರ ವಿಂಗಡಿಸಿ ಇಡುತ್ತಿದ್ದರು. ಶ್ರೀ ಶರತ್ ಹಾಗೂ ಇತರ ಸ್ವಯಂ ಸೇವಕರು ಇವುಗಳನ್ನು ನಿಗದಿತ ದಿನದಂದು ಅಂಚೆಕಛೇರಿಗೆ ತಲುಪಿಸುತ್ತಿದ್ದರು. ತಡವಾದರೆ ಕಛೇರಿಯ ವಿಶೇಷ ಅನುಮತಿಯನ್ನು ಪಡೆಯಬೇಕು! ನಾನಾ ಪ್ರಕಾರದ ಸಂಯೋಜನೆಯೊಂದಿಗೆ ಪತ್ರಿಕೆ ಓದುಗರಿಗೆ ತಲುಪುತ್ತದೆ. ಅನೇಕರಿಗೆ ಇದೆಲ್ಲದರ ಪರಿಚಯವಿರುವುದಿಲ್ಲ! ನಮ್ಮ ವಿಳಾಸಕ್ಕೆ ಪತ್ರಿಕೆ ಬರಲಿಲ್ಲ ಎಂದು ಕರೆ ಮಾಡುತ್ತಿದ್ದರು ಅಥವಾ ಕಾಗದ ಹಾಕುತ್ತಿದ್ದರು! ಮತ್ತೊಮ್ಮೆ ಅವರಿಗೆ ಪತ್ರಿಕೆಯನ್ನು ಕಳಿಸುವ ವ್ಯವಸ್ಥೆಯಾಗುತ್ತಿತ್ತು. ದಸರಾ, ದೀಪಾವಳಿ, ಕ್ರಿಸ್‌ಮಸ್, ಯುಗಾದಿ ಹಬ್ಬದ ಸಮಯದಲ್ಲಿ ಅಂಚೆಕಛೇರಿಯ ಸಿಬ್ಬಂದಿ ವರ್ಗದವರಿಗೆ ಹೆಚ್ಚು ಕೆಲಸ! ಪತ್ರಿಕೆಯನ್ನು ತಲುಪಿಸುವಲ್ಲಿ ತಡವಾಗುತ್ತಿತ್ತು! ದೂರವಾಣಿಯ ಕರೆಗಳನ್ನು ಸ್ವೀಕರಿಸಿ ಓದುಗರ ಸಮಸ್ಯೆಗಳಿಗೆ ಸ್ಪಂದಿಸಲು ಒಬ್ಬರನ್ನು ನೇಮಿಸಿಕೊಳ್ಳಲಾಯಿತು. ಹೀಗೆ ಅನೇಕ ರೀತಿಯ ಪರಿಸ್ಥಿತಿಗಳ ಮೂಲಕ ಪತ್ರಿಕೆಯ ಮುದ್ರಣ ಹಾಗೂ ಪ್ರಸಾರ ಸಾಗಿ ಬಂದಿದೆ. ಪ್ರಾರಂಭದಲ್ಲಿ ಸಹಕರಿಸಿದ ಓದುಗರಿಗೆ, ಚಂದಾದಾರರಿಗೆ ನಾವು ಚಿರಋಣಿಗಳು. ಇವರೆಲ್ಲರ ಬೆಂಬಲದಿಂದ ಈಗ ಪತ್ರಿಕೆ ೨೫ ವರ್ಷಗಳ ಸಂಭ್ರಮ ಕಾಣುತ್ತಿದೆ!

ಒಂದು ಗಿಡವನ್ನು ನೆಟ್ಟು, ಅದಕ್ಕೆ ಆರೈಕೆ ಮಾಡಿ, ಆ ಗಿಡ ಮರವಾಗಿ ಬೆಳೆದು ಹೂಹಣ್ಣುಗಳನ್ನು ಬಿಟ್ಟಾಗ, ಜನ ಅದರ ಉಪಯೋಗವನ್ನು ಪಡೆದಾಗ ಅದೆಷ್ಟು ಆನಂದವಾಗುತ್ತದೆ, ತೃಪ್ತಿಯಾಗುತ್ತದೆ! ವೇದಾಂತದ ಉದಾತ್ತ ವಿಚಾರಗಳನ್ನು, ಭಾರತೀಯ ಸಂಸ್ಕೃತಿ ಹಾಗೂ ಪರಂಪರೆಗಳನ್ನು, ದಿವ್ಯತ್ರಯರ ಜೀವನ ಸಂದೇಶಗಳನ್ನು ಕನ್ನಡದ ಜನರಿಗೆ ಉಣಬಡಿಸುತ್ತಿರುವ 'ವಿವೇಕಪ್ರಭ' ಪತ್ರಿಕೆ ನಿಜಕ್ಕೂ ಸಾರ್ಥಕ. ದೇಶ-ವಿದೇಶಗಳಿಂದ ಓದುಗರು ಮೆಚ್ಚಿಗೆಯ ಪತ್ರಗಳನ್ನು ಬರೆದಾಗ, ಅವುಗಳನ್ನು ಓದಿದಾಗ, ಶ್ರಮವಹಿಸುತ್ತಿದ್ದ ಸಿಬ್ಬಂದಿ ವರ್ಗದವರಿಗೆ, ಭಕ್ತರಿಗೆಲ್ಲ ಸಂತೋಷವಾಗುತ್ತಿತ್ತು! ತಮ್ಮ ಸೇವೆ ಜನಾರ್ದನನಿಗೆ ಸೇರಿದೆ ಎಂದು ಭಾವಿಸುತ್ತಿದ್ದರು!

ಪ್ರತಿವರ್ಷ ಒಂದು ವಿಶೇಷ ಸಂಚಿಕೆಯನ್ನು ತರುತ್ತಿರುವುದು 'ವಿವೇಕಪ್ರಭ'ದ ಮತ್ತೊಂದು ಹೆಮ್ಮೆಯ ವಿಷಯ. ಸಾಮಾನ್ಯವಾಗಿ ಎಲ್ಲ ಪತ್ರಿಕೆಗಳು ಒಂದು ವಿಶೇಷ ಸಂಚಿಕೆಯನ್ನು ತರುತ್ತವೆ. ಅದೇ ರೀತಿಯಲ್ಲಿ 'ವಿವೇಕಪ್ರಭ' ಕೂಡ ಮಾಡಬೇಕು ಎಂದು ತೀರ್ಮಾನಿಸಲಾಯಿತು. ಅದಕ್ಕೆ ಬೇಕಾದ ವಿಷಯ ಅನುಮತಿ, ಹಣ ಹಾಗೂ ಜಾಹೀರಾತುಗಳ ವ್ಯವಸ್ಥೆ-ಇವನ್ನೆಲ್ಲ

ಮಾಡುವುದು ಸುಲಭದ ಕೆಲಸವಲ್ಲ. ಶ್ರೀರಾಮಕೃಷ್ಣರ, ಶ್ರೀಮಾತೆ ಶಾರದಾದೇವಿಯ ಕೃಪೆಯಿಂದ ಪ್ರಾರಂಭವಾದ ಈ ಪತ್ರಿಕೆಯು ಇನ್ನೂ ಹೆಚ್ಚು ಸ್ವೀಕೃತವಾಗಬೇಕು, ಎಲ್ಲ ಜನರ ಮಾನಸದಲ್ಲಿ ನವಚೇತನ ತುಂಬಬೇಕು ಎಂದು ನಮ್ಮೆಲ್ಲರ ಆಸೆ. ಪತ್ರಿಕೆಗಳ ಧ್ಯೇಯದ ಬಗ್ಗೆ ಸ್ವಾಮಿ ವಿವೇಕಾನಂದರು ಹೀಗೆ ನಿರ್ದೇಶಿಸಿದ್ದಾರೆ, ''ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು.' ಪತ್ರಿಕೆಗೆ ಆಶೀರ್ವಚನ ಬರೆದ ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿ ಹೇಳುತ್ತಾರೆ, ''ಮನುಷ್ಯನಿರ್ಮಾಣಕಾರಿ, ರಾಷ್ಟ್ರನಿರ್ಮಾಣಕಾರಿ ಭಾವನೆಗಳು ಜನರಲ್ಲಿ ಹರಡುವ ಕಾರ್ಯದಲ್ಲಿ 'ವಿವೇಕಪ್ರಭ'ವು ಒಂದು ಸಾಧನವಾಗುತ್ತದೆ. ನಮ್ಮ ಜನರು ಬಹಳಷ್ಟು ಕಲಿತಿದ್ದಾರೆ. ಆದರೆ ಆಧುನಿಕ ಪ್ರಗತಿಪರ ರಾಷ್ಟ್ರನಿರ್ಮಾಣವಾಗಬೇಕಾದರೆ ಅವರು ಇನ್ನೂ ಕಲಿಯುವುದು ಬಹಳವಿದೆ. ಪತ್ರಿಕೆಯು ಯಶಸ್ವಿಯಾಗಲೆಂದು ನಾನು ಪ್ರೀತಿಪೂರ್ವಕವಾಗಿ ಆಶೀರ್ವದಿಸುತ್ತೇನೆ.''

ಭಗವಾನ್ ಬುದ್ಧ ತನ್ನ ಶರೀರವನ್ನು ಬಿಡುವ ಸಮಯ ಬಂದಾಗ, ಪ್ರಿಯ ಶಿಷ್ಯ ಆನಂದ ಕೇಳಿದ, ''ಗುರುಗಳೇ, ನೀವಿಲ್ಲದಿರುವಾಗ ನಾವು ಹೇಗೆ ಜೀವನವನ್ನು ನಡೆಸಬೇಕು? ನೀವಿಲ್ಲದೆ ನಮ್ಮಗಳ ಗತಿಯೇನು?'' ಕಣ್ಣೀರು ಸುರಿಸುತ್ತಿದ್ದ ಶಿಷ್ಯನಿಗೆ, ಬುದ್ಧ ಹೇಳಿದ, ''ದುಃಖಿಸಬೇಡ ಆನಂದ! ನೀವೆಲ್ಲ ಬೆಳಕನ್ನು ಕಂಡಿದ್ದೀರ. ನಿಮ್ಮ ಹಣತೆಗಳನ್ನು ಬೆಳಗಿಸಿರುವೆ. ಅವುಗಳಿಂದ ಎಲ್ಲೆಡೆ ಬೆಳಕನ್ನು ನೀಡುತ್ತ, ಇತರರ ಹಣತೆಗಳನ್ನು ಬೆಳಗುತ್ತ ಬನ್ನಿ.'' ಈ ಕೆಲಸ 'ವಿವೇಕಪ್ರಭ' ಮುಂದುವರಿಸಲಿ ಶತಮಾನಗಳ ಕಾಲ, ಕನ್ನಡನಾಡಿನ ಬಿರಿ, ಸವಿ, ಸುಗಂಧಗಳನ್ನು ಎಲ್ಲೆಡೆ ಪಸರಿಸಲಿ ಎಂದು ಎಲ್ಲರಿಗೂ ಹಾರೈಸುವ.

ಲೇಖನಗಳನ್ನು ಸಂಗ್ರಹಿಸಿ, ಪರಿಶೀಲಿಸಿ ಪತ್ರಿಕೆಯನ್ನು ರೂಪಿಸುವ ಕೆಲಸ ಸಂಪಾದಕರದು. ಕರಡು ಪ್ರತಿಗಳನ್ನು ತಿದ್ದಲು ಅವರಿಗೆ ನೆರವು ನೀಡುತ್ತಿದ್ದರು, ಡಾ. ಪ್ರಭುಶಂಕರರು. ತಮ್ಮ ಅನೇಕ ಕೆಲಸಗಳ ಮಧ್ಯೆ ಈ ಸೇವೆಯನ್ನು ಪ್ರೀತಿಯಿಂದ ಮಾಡುತ್ತಿದ್ದರು. ಉತ್ತಮ ಲೇಖನಗಳನ್ನು ಬರೆಯುತ್ತಿದ್ದರು. ಇನ್ನೂ ಅನೇಕ ಮಹನೀಯರು, ವಿಖ್ಯಾತ ಲೇಖಕರು 'ವಿವೇಕಪ್ರಭ'ಕ್ಕೆ ಲೇಖನ ನೀಡಿ ಪತ್ರಿಕೆಯ ಸೊಬಗನ್ನು ಹೆಚ್ಚಿಸಿದ್ದಾರೆ. ಹೀಗೆ ಪತ್ರಿಕೆ ಶ್ರೀಮಂತವಾಗುತ್ತಾ ಬಂದಿದೆ. ಅನೇಕ ಉತ್ತಮ ಅನುವಾದಗಳನ್ನು ಪತ್ರಿಕೆ ಪ್ರಕಟಿಸಿದೆ. ಇದರಿಂದ ಉತ್ತಮ ಗ್ರಂಥಗಳೂ ಹೊರಬಂದಿವೆ. ಕನ್ನಡ ಸಾಹಿತ್ಯಪ್ರಪಂಚಕ್ಕೆ ಈ ಪತ್ರಿಕೆ ಒಂದು ಉತ್ತಮ ಕೊಡುಗೆ ಹಾಗೂ ಭರವಸೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಪತ್ರಿಕೆಯೊಂದು ನದಿಯಿದ್ದಂತೆ. ಹೊಸವಿಚಾರಗಳು, ಭಾವನೆಗಳು ಪ್ರಕಟವಾದಾಗ ಪತ್ರಿಕೆ ಹೆಚ್ಚಿನ ಸೊಬಗನ್ನು ಪಡೆಯುತ್ತದೆ. ನದಿಗೆ ಶುಭ್ರವಾದ ನೀರು ಮೇಲಿನ ಪರ್ವತಗಳಿಗೆ ಹರಿದು ಬಂದಾಗ, ನದಿ ವಿಶಾಲವಾಗಿ ಸುಂದರ ಕಾಣುತ್ತದೆ. ಅಂತೆಯೇ ಉದಾತ್ತ ವಿಚಾರಗಳಿಂದ ಪತ್ರಿಕೆಯ ವಿಶಾಲತೆ ಹೆಚ್ಚಾಗಿ ಜನರ ಹಾಗೂ ಸಮಾಜದ ಅಭಿವೃದ್ಧಿಗೆ ಕಾರಣವಾಗುತ್ತದೆ. ❃

## ಶ್ರೀಮಾತೆಯವರ ಉಪದೇಶಗಳು



❃ ಮಗೂ, ಕೇವಲ ಓದಿದರೆ ಭಗವಂತನ ಮೇಲೆ ಶ್ರದ್ಧೆಯುಂಟಾಗುವುದೆ? ಹೆಚ್ಚು ಓದಿದರೆ ಗೊಂದಲವುಂಟಾಗುವುದು. ಶ್ರೀರಾಮಕೃಷ್ಣರು ಹೇಳಿದ್ದರು, 'ಜಗತ್ತು ಮಿಥ್ಯೆ ; ಭಗವಂತ ಮಾತ್ರ ಸತ್ಯ — ಶಾಸ್ತ್ರ ತಿಳಿದ ಮೇಲೆ ಇದನ್ನೇ ಅರಿತುಕೊಳ್ಳಬೇಕು' ಅಂತ. ನಾನು ನಿನಗೆ ಪತ್ರ ಬರೆದದ್ದಕ್ಕೆ ಅನುಗುಣವಾಗಿ ನೀನು ಆಯಾ ಸಾಮಾನುಗಳನ್ನು ತೆಗೆದುಕೊಂಡು ಬರುತ್ತೀಯಾ. ಅಂದ ಮೇಲೆ ಪತ್ರದ ಅಗತ್ಯ ಎಲ್ಲಿಯ ತನಕ? ಅದರಲ್ಲಿ ಏನಿದೆಯೋ ತಿಳಿಯುವವರೆಗೆ ಅಷ್ಟೇ. ಯಾವಾಗ ಅದರಲ್ಲೇನಿದೆ ಎಂದು ತಿಳಿದುಬಂತೋ, ಅನಂತರ ಅದರ ಅಗತ್ಯವೇನು? ಅನಂತರ ನೀನು ಆ ವಸ್ತುಗಳನ್ನೆಲ್ಲ ನನ್ನ ಬಳಿಗೆ ತಂದುಬಿಡುತ್ತೀಯಾ. ಅದಕ್ಕೆ ಬದಲಾಗಿ, ಹಗಲು ರಾತ್ರಿ ಪತ್ರ ಓದುತ್ತಿದ್ದರೆ ಅದರಿಂದೇನು ಲಾಭ?

❃ **ಶಿಷ್ಯ :** ಅಮ್ಮಾ, ನಾನು ಎಷ್ಟೊಂದು ಬಾರಿ ನಿಮ್ಮ ಬಳಿಗೆ ಬಂದು ಹೋಗುತ್ತಿದ್ದೇನೆ, ನಿಮ್ಮ ಕೃಪೆಯನ್ನೂ ಪಡೆದೆ. ಆದರೂ ನನಗೆ ಏನೂ ಆಗುತ್ತಿಲ್ಲವಲ್ಲ, ಏಕೆ? ನಾನು ಹೇಗಿದ್ದೇನೋ ಹಾಗೇ ಇದ್ದೇನೆ ಎಂದು ನನಗನ್ನಿಸುತ್ತದೆ. ''

**ಶ್ರೀಮಾತೆ :** ಮಗೂ, ನೀನು ಒಂದು ಮಂಚದ ಮೇಲೆ ಮಲಗಿ ನಿದ್ದೆ ಹೋಗಿದ್ದೀಯಾ ಅಂತಿಟ್ಟುಕೋ— ಯಾರೋ ಅಲ್ಲಿಗೆ ಬಂದು ಮಂಚದ ಸಮೇತ ನಿನ್ನನ್ನು ಬೇರೆ ಕಡೆ ಒಯ್ದುಬಿಟ್ಟರೆ, ನಿದ್ದೆಯಿಂದ ಎದ್ದ ಮೇಲೆ ನಿನಗೆ ಬೇರೆ ಸ್ಥಳಕ್ಕೆ ಬಂದ ಸಂಗತಿ ತಿಳಿಯುವುದೆ? ನಿದ್ದೆಯ ಮತ್ತು ಇಳಿದು ಹೋದ ನಂತರ ನಿನಗೆ ಗೊತ್ತಾಗುವುದು, ಬೇರೆ ಕಡೆಗೆ ಬಂದಿದ್ದೀಯಾ ಅಂತ.''

❃ ಹೇಗಾದರೂ ಮಾಡಿ ಮೊದಲು ತನ್ನ ಉದ್ದೇಶವನ್ನು ಸಾಧಿಸಿಬಿಡಬೇಕು. ಮೊದಲು ಮಾಡಬೇಕಾದ ಕೆಲಸವನ್ನು ಮೊದಲೇ ಮಾಡಿ ಮುಗಿಸಬೇಕು.

*('ಶ್ರೀಶಾರದಾದೇವಿ ವಚನವೇದ', ಪು. ೧೫೪-೫೫)*